ಅ) ಗೌರಿಬಿದನೂರು ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಮಸೀದಿಗಳಿಲ್ಲದೇ ಮುಸ್ಲಿಂ ಭಾಂದವರು ಪ್ರಾರ್ಥನೆ ಸಲ್ಲಿಸಲು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಪರಿಹಾರಕ್ಕೆ ಯಾವ ಕ್ರಮ ಕೈಗೊಂಡಿದೆ?

ಇ) ಸರ್ಕಾರ ಮಸೀದಿ ನಿರ್ಮಿಸಲು ಸಹಾಯ ಸಹಕಾರ ನೀಡುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) ನಿರ್ದಿಷ್ಟ ವಕ್ಫ್ ಸಂಸ್ಥೆಯಿಂದ ಇಂತಹ ಪ್ರಸ್ತಾವನೆ ಬಂದಲ್ಲಿ ಹಣದ ಲಭ್ಯತೆ ಆಧರಿಸಿ ಸಹಾಯ ಮಾಡಲಾಗುವುದು.

522(559) ಶ್ರೀ ಡಾ॥ ಸುಧಾಕರ್ ಎಂ.ಸಿ. (ಚಿಂತಾಮಣಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಂತಾಮಣಿ ನಗರದ ಬಾಲಕರ ಸರ್ಕಾರಿ ಕಾಲೇಜಿನಲ್ಲಿ ಎಷ್ಟು ವಿಷಯಗಳನ್ನು ಬೋಧಿಸುತ್ತಿದ್ದಾರೆ ಎಂಬುದನ್ನು ತಿಳಿಸುವುದು;

ಆ) ಎಲ್ಲಾ ವಿಷಯಗಳ ಕಾರ್ಯಭಾರವನ್ನು ನಿರ್ವಹಿಸಲು ಎಷ್ಟು ಉಪನ್ಯಾಸಕರು ಬೇಕಾಗುತ್ತದೆ ಎಂಬುದನ್ನು ತಿಳಿಸುವುದು;

ಇ) ಈ ಎಲ್ಲಾ ವಿಷಯಗಳನ್ನು ಬೋಧಿಸಲು ಅವಧಿಗೆ ತಕ್ಕಂತೆ ಕಾರ್ಯಭಾರವನ್ನು ನಿರ್ವಹಿಸಲು ಅಗತ್ಯವಿರುವ ಉಪನ್ಯಾಸಕರು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಕುರಿತಾಗಿ ಸರ್ಕಾರ ತುರ್ತಾಗಿ ಯಾವ ಕ್ರಮಕೈಗೊಳ್ಳುತ್ತದೆ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) 15 ವಿಷಯಗಳನ್ನು ಬೋಧಿಸಲಾಗುತ್ತಿದೆ.

ಆ) 28 ಉಪನ್ಯಾಸಕರು ಬೇಕಾಗುತ್ತದೆ

ಇ) 2003–04ನೇ ಸಾಲಿನ ಕಾರ್ಯಭಾರಕ್ಕನುಗುಣವಾಗಿ ಇಂಗ್ಲೀಷ್, ರಾಜ್ಯಶಾಸ್ತ್ರ, ವಾಣಿಜ್ಯಶಾಸ್ತ್ರ ಹಾಗೂ ಗಣಕ ವಿಜ್ಞಾನ ವಿಷಯ ಹೊರತುಪಡಿಸಿ ಉಳಿದೆಲ್ಲ ವಿಷಯಗಳಲ್ಲಿ ಉಪನ್ಯಾಸಕರ ಕೊರತೆ ಇಲ್ಲ.

ಈ) 2004–05ನೇ ಸಾಲಿನ ಕಾರ್ಯಭಾರವನ್ನು ಪಡೆದು, ಪರಿಶೀಲಿಸಿ ಅಗತ್ಯತೆ ಇರುವ ಉಪನ್ಯಾಸಕರನ್ನು ಭರ್ತಿ ಮಾಡಲು ಪರಿಶೀಲಿಸಲಾಗುವುದು.

523(619) ಶ್ರೀ ವೆಂಕಮುನಿಯಪ್ಪ ಬಿ.ಪಿ (ಬೇತಮಂಗಲ) : ಮಾನ್ಯ ಧರ್ಮಸಿಂಗ್ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕುರಿ ಸಾಕಾಣಿಕೆ ಮಾಡುವವರಿಗೆ ಶೆಡ್‌ಗಳನ್ನು ನಿರ್ಮಿಸಲು ಸಬ್ಸಿಡಿ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಇ) ಕುರಿ ಸಾಕಾಣಿಕೆ ಮಾಡುವವರಿಗೆ ಸಹಾಯಧನವನ್ನು ಎಂದಿನಿಂದ ಹಾಗೂ ಎಷ್ಟು ಪ್ರಮಾಣದಲ್ಲಿ ನೀಡಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಸಹಾಯಧನ ನೀಡುವ ಕಾರ್ಯಕ್ರಮ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

525(815) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಕಾರಣಕರ್ತರಾದ ಕರ್ನಾಟಕ ಏಕೀಕರಣ ಧುರೀಣರಾದ ದಿವಂಗತ ಎಸ್.ಆರ್. ಕಂಠಿಯವರ ಹೆಸರನ್ನು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ನಾಮಕರಣ ಮಾಡಲು ಸರ್ಕಾರವು ಯೋಚಿಸಿದೆಯೇ;

ಆ) ಬೆಂಗಳೂರು ವಿಶ್ವವಿದ್ಯಾನಿಲಯದ ಸಮಗ್ರ ಬೆಳವಣಿಗೆಗೆ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಭವಿಷ್ಯದ ಶೈಕ್ಷಣಿಕ ಮತ್ತು ಸಂಶೋಧನಾ ಅಭಿವೃದ್ಧಿಗಾಗಿ ಬೆಂಗಳೂರು ವಿಶ್ವವಿದ್ಯಾಲಯ ಈ ಕೆಳಕಂಡ ಪ್ರಮುಖವಾದ ಯೋಜನೆಗಳನ್ನು ಹಮ್ಮಿಕೊಂಡಿದೆ:–

1) ಹೊಸ ಶೈಕ್ಷಣಿಕ ಕೋರ್ಸುಗಳನ್ನು ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಉದ್ದೇಶ ಪೂರಿತ ಚಟುವಟಿಕೆಗಳನ್ನು ಜೈವಿಕವಿಜ್ಞಾನ, ಸೂಕ್ಷ್ಮ ವಿಜ್ಞಾನವನ್ನು ಹಾಗೂ ಮಾಹಿತಿ ತಂತ್ರಜ್ಞಾನ ಇವುಗಳಲ್ಲಿ ಉನ್ನತ ವ್ಯಾಸಂಗವನ್ನು ಮುಂದುವರಿಸಲು ಆ ವಿಭಾಗಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸುವುದು.

2) ಜೈವಿಕ ವಿಜ್ಞಾನ ಹಾಗೂ ಭೌತಶಾಸ್ತ್ರ ಇವುಗಳಲ್ಲಿ ರಾಷ್ಟ್ರೀಯ ಮಟ್ಟದ ಸಂಶೋಧನ ಕೇಂದ್ರಗಳನ್ನು ಸ್ಥಾಪಿಸುವುದು.

3) ಇಂಟಿಗ್ರೇಟೆಡ್ ಬಿಎಸ್ಸಿ., ನಾಲ್ಕು ವರ್ಷದ ಬಿಎಸ್ಸಿ., ಹಾನರ್ಸ್ ಹಾಗೂ ಎಂ.ಎಸ್ಸಿ., ಹೊಸ ಕೋರ್ಸುಗಳನ್ನು ಸೆಂಟ್ರಲ್ ಕಾಲೇಜಿನಲ್ಲಿ ಪುನರ್ ಪ್ರಾರಂಭಿಸುವುದು.

4) ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ವಿವಿದೋದ್ದೇಶ ವನಗಳನ್ನು ಶೈಕ್ಷಣಿಕ ಸಂಶೋಧನೆ ಹಾಗೂ ಉನ್ನತ ಅಧ್ಯಯನಕ್ಕೆ ಬೇಕಾಗುವ ವಿವಿಧ ಜಾತಿ ಸಸ್ಯಗಳು ಹಾಗೂ ವೈದ್ಯಕೀಯ ಗಿಡಗಳನ್ನು ಸಂರಕ್ಷಿಸುವ ಕಾರ್ಯವಿಧಾನಗಳ ಕೇಂದ್ರ ಸ್ಥಾಪನೆ ಮಾಡುವುದು.

5) ವಿದೇಶಗಳ ಶೈಕ್ಷಣಿಕ ಹಾಗೂ ಸಂಶೋಧನ (ಆರ್ ಅಂಡ್ ಡಿ) ವಿಭಾಗಗಳೊಂದಿಗೆ ಎಂಒಯು (ಒಡಂಬಡಿಕೆ) ಮಾಡಿಕೊಳ್ಳುವುದು.

526(807) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ಮಾವಿನ ಹಣ್ಣಿನ, ಸಗಟು ಮಾರಾಟವನ್ನು ಯಾವ ಸ್ಥಳದಲ್ಲಿ ನಡೆಸಲಾಗುತ್ತಿದೆ;

ಆ) ಸದರಿ ಸ್ಥಳದಲ್ಲಿ ನಡೆಸಲು ಸಗಟು ಮಾರಾಟಗಾರರು ನ್ಯಾಯಾಲಯದ ಮೊರೆ ಹೋಗಿರುವುದರ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;